ಶ್ರೀ ಜಿ. ಎನ್. ಪಾಟೀಲ್—ಎಲ್ಲೆ ಕಾಂಪಿಟೀಷನ್ ಇರುತ್ತದೆ ಅಲ್ಲಿ ಜನಗಳಿಗೆ ಸೌಲಭ್ಯ ಹೆಚ್ಚಾಗಿ ಸಿಕ್ಕುತ್ತದೆ. ಆ ಕಾರಣದಿಂದ ನ್ಯಾಷನಲೈಸ್ ಮಾಡಿ ಮನಾಪಲಿ ಮಾಡಿಕೊಳ್ಳುವುದನ್ನು ಸರ್ಕಾರದವರು ಕೈ ಬಿಡುವರೇ ?

Sri MOHAMED ALI.—After considering every aspect of the question, the Government has declared the policy of total nationalisation of stage carriages in the State and there is no question of going back on this policy.

ಶ್ರೀ ಎಲ್. ಶ್ರೀಕಂಠಯ್ಯ.—ಅಶೋಕಾ ಟ್ರಾವಲ್ಸ್, ಜನತಾ ಟ್ರಾವಲ್ಸ್ ಈ ಬಸ್ಸುಗಳನ್ನು ನೋಡಿದರೆ, ಸಾಮಾನ್ಯವಾಗಿ ಈ ಲಕ್ಷುರಿ ಬಸ್ಸುಗಳಿಗೆ ಒಂದು ಲಕ್ಷದಿಂದ ಒಂದೂವರೆ ಲಕ್ಷ ರೂಪಾಯಿ ಆಗತ್ತದೆ. ಈ ಬಸ್ಸುಗಳನ್ನು ಕೊಂಡುಕೊಳ್ಳುವುದಕ್ಕೆ ಅವರಿಗೆ ದುಡ್ಡು ಎಲ್ಲಿಂದ ಬಂತು ? ಅರಾಟ್ ಆಗುವುದಕ್ಕೆ ಮುನ್ನ ಸರ್ಕಾರದವರು ಅವರಿಗೆ ಅನುಮತಿ ಕೊಟ್ಟರೆ ?

Sri MOHAMED ALI.—We do not allot them ; they purchase chasis, arrange for the building of bodies and finally when the bus is ready they apply for permit. The question of Government allotment of bus or provding funds does not arise.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.— ಸರ್ಕಾರದ ಬೆಂಬಲ ಪಡೆದು ಹಾಗೂ ಅಧಿಕಾರಿಗಳಿಗೆ ಸಲ್ಲಿಸಬೇಕಾದ ಹಣವನ್ನು ಸಲ್ಲಿಸಿ ಕಾಂಟ್ರಾಕ್ಟ್ ಕ್ಯಾರಿಯೇಜಿಸ್ ರಾತ್ರಿ ಇಷ್ಟು ಹೊತ್ತಿಗೆ ಇಂಥ ಕಡೆಯಿಂದ ಅದನ್ನು ಹೊರಡಿಸಬೇಕೆಂಬ ಒಂದು ನಿಯಮ ಮಾಡಿಕೊಟ್ಟಿದ್ದಾರೆಯೇ ಸ್ವಾಮಿ ?

ಅಧ್ಯಕ್ಷರು.—ಅವು ಅವರ ಕಂಟ್ರೋಲ್‌ನಲ್ಲಿ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಷ್ಟೂ ಮಂತ್ರಿಗಳು ಬೇಕಾದರೆ ಬರಲಿ, ಆ ಬಸ್ಸುಗಳಲ್ಲಿ ಟ್ರಾವರ್ ಮಾಡಬಹುದು. ದಿವಸಕ್ಕೆ ಎರಡು ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾ ಇದ್ದಾರೆ. ನಮ್ಮ ಸರ್ಕಾರಿ ಬಸ್ಸುಗಳಿಗೆ ನಷ್ಟವಾಗುತ್ತಾ ಇದೆ. ಯಾರು ಇದನ್ನು ತೀರ್ಮಾನ ಮಾಡುವವರು? ಯಾರು ಉತ್ತರ ಕೊಡುವವರು ? ಎಷ್ಟು ಹಣ ಯಾರ್ಯಾರು ಪಡೆಯುತ್ತಾರೆ ಎಂಬುದು ನಮಗೆ ಹೇಗೆ ಗೊತ್ತಾಗಬೇಕು ?

Sri MOHAMED ALI.—I have given the dates on which surprise visits have been made and said that the report has been sent to the R.T.O. We have to wait for the decision. Government cannot take a decision in the matter.

ಶ್ರೀ ಎನ್. ಜಿ. ಹಾಲಪ್ಪ. - ಮಂತ್ರಿಗಳು ಇವತ್ತು ರಾತ್ರಿ ಹತ್ತೂವರೆಗಂಟೆಗೆ ಅನಂದರಾವ್ ಸರ್ಕಲಿಗೆ ಬಂದರೆ ಟಿಕೆಟ್ ಕೊಡಿಸುತ್ತೇನೆ. ಸುಮಾರು ಎರಡು ತಿಂಗಳಿಂದ, ತಿಂಗಳಿಗೆ ಒಂದು ಸಾವಿರ ರೂಪಾಯಿನಂತೆ ಮಾಮೂಲು ತೆಗೆದುಕೊಂಡು ಇಲ್ಲೀಗಲ್ ಟ್ರಾಫಿಕ್‌ಗೆ ಅವಕಾಶ ಮಾಡಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri MOHAMED ALI.—It has not come to my notice.

Registration in Employment Exchange

734. Sri S. R. SHANMUGAM (K. G. F.).—

Will the Minister for Law, Labour and Parliamentary Affairs be pleased to state :—

(*a*) number of persons registered in the Local Employment Exchange for employment for the past three years in Kolar (Yearwise, with all details) ;

(*b*) of them the number that have secured jobs through the Employment Exchange during the said years ?

Sri K. PUTTASWAMY (Minister for Law, Labour and Parliamentary Affairs).—

(*a*) and (*b*) *Vide* statement appended.

STATEMENT

Sl. No.	Year	Number of applicants registered during the year	Number of persons who secured jobs during the year
1	1966	10,952	773
2	1967	13,661	758
3	1968	11,197	2,144

ಶ್ರೀ ಎಸ್. ಆರ್. ಪನ್ನುಗಂ.—1966-67, 67-68ನೇ ವರ್ಷಗಳಲ್ಲಿ ಕೆ. ಜಿ. ಎಫ್. ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಎಷ್ಟು ಜನ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ? ಆ ವರ್ಷಗಳಲ್ಲಿ ಎಷ್ಟು ಜನರಿಗೆ ಕೆಲಸ ದೊರಕಿದೆ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿದೆ ಆದರೂ ಕೂಡ ಮಾನ್ಯ ಸದಸ್ಯರ ಉಪಯೋಗಕ್ಕೆ ಹೇಳುತ್ತೇನೆ.

1966ರಲ್ಲಿ 10,952 ಜನ ರಿಜಿಸ್ಟರ್ ಮಾಡಿಸಿದ್ದಾರೆ 773 ಜನಕ್ಕೆ ಕೆಲಸ ಸಿಕ್ಕಿದೆ
1967ರಲ್ಲಿ 13,661 ಜನ ರಿಜಿಸ್ಟರ್ ಮಾಡಿಸಿದ್ದಾರೆ 758 ಜನಕ್ಕೆ ಕೆಲಸ ಸಿಕ್ಕಿದೆ
1968ರಲ್ಲಿ 11,197 ಜನ ರಿಜಿಸ್ಟರ್ ಮಾಡಿಸಿದ್ದಾರೆ 2,144 ಜನಕ್ಕೆ ಕೆಲಸ ಸಿಕ್ಕಿದೆ

ಶ್ರೀ ಜಿ. ನಾರಾಯಣಗೌಡ.—ಈ ಉದ್ಯೋಗ ವಿನಿಮಯ ಕೇಂದ್ರ ಹಾಲಿ ಕೆ. ಜಿ ಎಫ್. ನಲ್ಲಿ ಇರುವುದರಿಂದ ಜಿಲ್ಲೆಯ ಇತರೇ ಭಾಗಗಳಲ್ಲಿರತಕ್ಕ ಜನರಿಗೆ ಇದು ಬಹಳ ದೂರವಾಗುತ್ತಿರುವುದರಿಂದ ಇದನ್ನು ಜಿಲ್ಲಾ ಕಸಬೆಗೆ ವರ್ಗಾಯಿಸಲಾಗುವುದೇ? ಇದು ಹಾಲಿ ಇರತಕ್ಕ ಕಡೆ ಇರುವುದರಿಂದ ಅಲ್ಲಿ ಬರಿ ತಮಿಳರು ಮತ್ತು ಮಲೆಯಾಳಿಗಳಿಗೆ ಮಾತ್ರ ಅನುಕೂಲವಾಗಿದೆ, ಇದರಿಂದ ಕನ್ನಡಿಗರಿಗೇನೂ ಅನುಕೂಲವಾಗುತ್ತಿಲ್ಲ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.— ಮಾನ್ಯ ಸದಸ್ಯರು ಹೇಳಿದ್ದನ್ನು ಪರಿಶೀಲನೆಮಾಡಲಾಗುವುದು.

ಶ್ರೀ ಎಲ್. ಶ್ರೀಕಂಠಯ್ಯ.—ರಿಜಿಸ್ಟರ್ ಮಾಡಿಸಿಕೊಳ್ಳತಕ್ಕ ನಿರುದ್ಯೋಗಿಗಳು ತಲಾ 100 ರೂಪಾಯಿ ರಾಸುವಂ ಕೊಡಬೇಕೆಂದು ಹೇಳಿ ಹಣವನ್ನು ಹೇರಳವಾಗಿ ವಸೂಲ್ಮಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

Mr. SPEAKER.—The question refers to Kolar. So I cannot permit that question.

Sri L. SRIKANTAIAH.—I beg to differ from the Speaker. The heading of the question is "Registration in Employment Exchange."

Mr. SPEAKER.—The hon. Member should look into the question and not be guided by the Heading.

ಶ್ರೀ ಎ. ಮುನಿಯಪ್ಪ.—ಅಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ತಪ್ಪಿಸಲು ಒಂದು ಸಮಿತಿಯನ್ನು ಸರ್ಕಾರದವರು ನೇಮಕ ಮಾಡಿದ್ದರು ಆದರೆ ಆ ಉದ್ಯೋಗವಿನಿಮಯ ಅಧೀನದ ಅಧಿಕಾರಿಗಳು ಆ ಮೀಟಿಂಗನ್ನೇ ಕರೆಯದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri K. PUTTASWAMY.—The hon. Member is asking me a question about Employment Advisory Board. This question does not pertain to that. I will have to ask him notice for that.

Sri J. P. SARWESH.—Since the day on which the Employment Advisory Committees are formed in the districts, no meeting has been called so far. Is it not the same case in K. G. F. ?

ಅಧ್ಯಕ್ಷರು.—ತಾವು ಕೇಳತಕ್ಕ ಉಪಪ್ರಶ್ನೆ ಇದರ ಕಕ್ಷೆಯಲ್ಲಿ ಬರುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಕೋರಾರ ಜಿಲ್ಲೆಯಲ್ಲಿ ಆ ಅಡ್ವೈಜರಿ ಬಾಡಿ ಎಷ್ಟು ಸಾರ್ತಿ ಮೀಟಿಂಗ್ ಕರೆದಿತ್ತು ?

ಅಧ್ಯಕ್ಷರು.—ಅದೂ ಕೂಡ ಇದರ ಕಕ್ಷೆಯಲ್ಲಿ ಬರುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಆ ಕೆ. ಜಿ. ಎಫ್. ನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಲು 50, 100 ಮತ್ತು 150 ರೂಪಾಯಿಗಳನ್ನು ವಸೂಲ್ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಕೆಲವರು ರಿಜಿಸ್ಟ್ರರಾಗಿ 3-4 ವರ್ಷಗಳಾದರೂ ಅವರಿಗೇನೂ ಪ್ರಯೋಜನವಿಲ್ಲ ; ಇನ್ನು ಕೆಲವರಿಗೆ 2-3 ತಿಂಗಳಲ್ಲೇ ನೌಕರಿಗಳು ಸಿಕ್ಕುತ್ತದೆ. ಆ ದೌರ್ಭಾಗ್ಯರನ್ನು ಕೇಳತಕ್ಕವರು ಯಾರು ? ತಪ್ಪಿತಸ್ಥರನ್ನು ಹಿಡಿದುಕೊಟ್ಟರೆ ಕ್ರಮ ಕೈಗೊಳ್ಳುತ್ತೀರಾ ?

Sri K. PUTTASWAMY.—Such allegations have not come to my notice. If the hon. Member were to cite any particular instance I will take very severe action.

Sri D. B. KALMANKAR.—In view of the fact that the persons who go to register their names for employment give and the persons who give the benefit take, there is no possibility of any complaint. We would like to know whether Government has got an agency to detect such things that are happening and are rampant there ?

Sri K. PUTTASWAMY.—We have our own machinery. If such things come to our notice, the hon. Member may depend on Government to take necessary action. But I think these are very wild allegations.

ಶ್ರೀ ಎಸ್. ಆರ್. ಷಣ್ಮುಗಂ.—ಕಳೆದ ಮೂರು ವರ್ಷಗಳಿಂದಲೂ ಅಂದರೆ, 1966, 1967 ಮತ್ತು 1968ನೇ ವರ್ಷಗಳಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಆಗಿರುವ ಜನಸಂಖ್ಯೆ 35,810. ಕೆಲಸ ಸಿಕ್ಕಿರುವುದು 3,675. ಇದರಲ್ಲಿ 32,135 ಜನಗಳಿಗೆ ಕೆಲಸವಿಲ್ಲ. ಆದ್ದರಿಂದ ಈ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸರ್ಕಾರದವರು ಈಗಲಾದರೂ ಸಿದ್ಧರಾಗಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಇಷ್ಟು ಜನರಿಗೆ ಕೆಲಸ ಸಿಗಲಿಲ್ಲವೆಂದು ಲೆಕ್ಕಹಾಕಿ ಹೇಳಿದ್ದಾರೆ. ರಿಜಿಸ್ಟರ್ ಮಾಡಿಸಿರುವವರು ಕೆಲಸಗಳು ಇಲ್ಲದ ನಿರುದ್ಯೋಗಿಗಳು ಎಂದು ಹೇಳುವುದಕ್ಕಾಗುವುದಿಲ್ಲ. ಅನೇಕರು ಈಗ ರಿಜಿಸ್ಟರ್ ಮಾಡಿರುವಂತಹವರಲ್ಲ, ಈಗಿರುವ ಉದ್ಯೋಗಕ್ಕಿಂತ ಹೆಚ್ಚು ಫಲದಾಯಕವಾದಂಥ ಉದ್ಯೋಗ ಪಡೆಯಬೇಕೆನ್ನುವವರೂ ಕೂಡ ಇದ್ದಾರೆ. ಕೆಲವರು ರಿಜಿಸ್ಟರ್ ಮಾಡಿಸಿಕೊಳ್ಳುವವರು ಆ ಸ್ಥಳದಲ್ಲಿ ಇರುವುದಿಲ್ಲ. ಬೇರೆ ಕಡೆ ಹೊರಟು ಹೋಗುತ್ತಾರೆ. ಇದು ನಿರುದ್ಯೋಗಿಗಳ ಸಂಖ್ಯೆ ಸೂಚಿಸುವುದಿಲ್ಲ. 5,318 ಜನರು ಅನಕ್ಷರಸ್ಥರೇ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಅಂತಹವರಿಗೆ ಒದಗಿಸುವ ಕೆಲಸಗಳು ಯಾವುದೂ ಇರುವುದಿಲ್ಲ. ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೋ ಅದನ್ನು ಇದು ಸೂಚಿಸುವುದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಉದ್ಯೋಗ ವಿನಿಮಯ ಕೇಂದ್ರಗಳಲ್ಲಿರತಕ್ಕವರು ರಿಜಿಸ್ಟರ್ ಮಾಡಿಸಿಕೊಳ್ಳಲು ಬರುವವರಿಗೆ ಇಷ್ಟೇ ಹಣ ಕೊಡಬೇಕೆಂದು ಸೂಚಿಸುತ್ತಾರೆ. ಮತ್ತು ಅಲ್ಲಿ

ಪಾರ್ಟಿ ಮಾಡಿಕೊಂಡಿರುವುದು ನಿಮ್ಮ ಗಮನಕ್ಕೆ ಬಂದಿದ್ದರೂ ಎಷ್ಟು ಜನಗಳ ಮೇಲೆ ಶಾಸನ ಪ್ರಕಾರ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಅಂಥಾದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ರಿಜಿಸ್ಟರ್ ಮಾಡಿಸಿಕೊಳ್ಳಬೇಕಾದರೆ, ಶುಲ್ಕವೇನೂ ಕೊಡಬೇಕಾಗಿಲ್ಲ. ಶುಲ್ಕ ಯಾರಾದರೂ ಅಲ್ಲಿ ವಸೂಲುಮಾಡುತ್ತಾರೆಂಬುದನ್ನು ನನಗೆ ತಿಳಿಸಿದರೆ, ಅದಕ್ಕೆ ಸಂಬಂಧಪಟ್ಟವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

Lotteries in the State

815. Sri K. H. SRINIVAS (Sagar).—

Will the Minister for Finance, Planning and Youth Welfare be pleased to state :—

(*a*) the Law under which the holding of Lotteries is prohibited in the State ;

(*b*) whether the Law will be amended for enabling the State Government to hold the Lotteries ;

(*c*) whether Government are also considering proposals to give permission to private organisations to raise money through lotteries exclusively for charitable purposes and for setting up educational institutions ?

Sri RAMAKRISHNA HEGDE (Minister for Finance, Planning and Youth Welfare).—

(*a*) There is no law prohibiting State Lotteries.

(*b*) Does not arise.

(*c*) No.

ಶ್ರೀ ಕೆ. ಎಚ್. ಶ್ರೀನಿವಾಸ.—(೫) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಈಗಾಗಲೇ ಅನೇಕ ರಾಜ್ಯಗಳಲ್ಲಿ ಲಾಟರಿ ನಡೆಸುತ್ತಿರುವುದರಿಂದ ಆ ಟಿಕೆಟ್‌ಗಳು ಭಾರಿ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಖರ್ಚಾಗುತ್ತಿವೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಲಾಟರಿ ನಡೆಸುವ ಆಲೋಚನೆಯಲ್ಲಿ ಸರ್ಕಾರ ಇದೆಯೆಂದು ತಿಳಿದುಬಂದಿದೆ. ಆದ್ದರಿಂದ ಖಾಸಗಿ ಸಂಘ ಸಂಸ್ಥೆಗಳಿಗೆ ಸಾಧ್ಯವಾದಷ್ಟುಮಟ್ಟಿಗೆ ಈ ವಿಚಾರದಲ್ಲಿ ಅನುಮತಿ ಕೊಡುವ ಬಗ್ಗೆ ಏಕೆ ಸರ್ಕಾರದವರು ಪರಿಶೀಲನೆ ಮಾಡಬಾರದು ?

†ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರದವರೇ ಲಾಟರಿ ನಡೆಸಬೇಕೆಂಬ ವಿಚಾರ ಈಗ ಇರುವುದರಿಂದ ಖಾಸಗೀ ಸಂಸ್ಥೆಗಳಿಗೆ ಅನುಮತಿ ಕೊಡಬೇಕೆಂದೇ ಕನ್‌ಫ್ಯೂಷನ್ ಆಗುತ್ತದೆ. ಅದು ಸರಿಯಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ.—ಬೇರೆ ರಾಜ್ಯದ ಲಾಟರಿ ಟಿಕೆಟ್‌ಗಳನ್ನು ಈ ರಾಜ್ಯದಲ್ಲಿ ಮಾರುವುದರಿಂದ ನಮ್ಮ ರಾಜ್ಯದ ಲಾಟರಿಗೆ ಧಕ್ಕೆಯಾಗುತ್ತದೆಂದು ಅದನ್ನು ಈಗಲೇ ಬಹಿಷ್ಕರಿಸುವ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ. ಈಗಿರುವ ಕಾಯಿದೆ ಪ್ರಕಾರ ಬೇರೆ ರಾಜ್ಯದಲ್ಲಿ ಲಾಟರಿ ನಡೆಸುತ್ತಿದ್ದಾರೆ. ಅದರ ಮಾರಾಟ ತಡೆಗಟ್ಟುವುದಕ್ಕೆ ನಮಗೆ ಹಕ್ಕು ಇಲ್ಲ. ಮದ್ರಾಸ್ ರಾಜ್ಯದಲ್ಲಿಯೂ ಇದರ ಬಗ್ಗೆ ಯಾವ ಪ್ರತಿಬಂಧಕ ಕಾನೂನು ಇಲ್ಲ.